**ಕರ್ನಾಟಕ ಸರ್ಕಾರ**
**ಸಮಾಜ ಕಲ್ಯಾಣ ಇಲಾಖೆ**
**ಪರೀಕ್ಷಾ ಪೂರ್ವ ತರಬೇತಿ ಕೇಂದ್ರ,**

ಸಂ: ಸಕಇ/ಪಪೂತಕೇ/S-5/CR-02/2023-24

ನಿರ್ದೇಶಕರ ಕಛೇರಿ,
ಪರೀಕ್ಷಾ ಪೂರ್ವ ತರಬೇತಿ ಕೇಂದ್ರ,
ಡಾ. ಬಿ.ಆರ್. ಅಂಬೇಡ್ಕರ್ ಭವನ,
ವಸಂತನಗರ, ಬೆಂಗಳೂರು – 560001,
ದಿನಾಂಕ: 07.05.2024.

ಎಲ್ಲಾ ಜಿಲ್ಲಾ ಜಂಟಿ / ಉಪ / ಸಹಾಯಕ ನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ,

ಮಾನ್ಯರೆ,

ವಿಷಯ:- ಪರೀಕ್ಷಾ ಪೂರ್ವ ತರಬೇತಿಗಾಗಿ ಆಯ್ಕೆಯಾದ ಅಭ್ಯರ್ಥಿಗಳ ಮೂಲ ದಾಖಲಾತಿಗಳನ್ನು ಪರಿಶೀಲಿಸುವ ಬಗ್ಗೆ.

~~~0~~~

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು UPSC / KAS / Banking / Group-C / SSC / RRB / Judicial Services ಪರೀಕ್ಷಾ ಪೂರ್ವ ತರಬೇತಿಗೆ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದಿಂದ ಆಯ್ಕೆ ಮಾಡಲಾಗಿದ್ದು, ಆಯ್ಕೆಯಾದ ಅಭ್ಯರ್ಥಿಗಳ ಮೂಲ ದಾಖಲೆಗಳನ್ನು ಈ ಕೆಳಕಂಡಂತೆ ಪರಿಶೀಲಿಸುವುದು.

1. ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು ಪರೀಕ್ಷಾ ಪೂರ್ವ ತರಬೇತಿ ಕೇಂದ್ರದಿಂದ ಜಿಲ್ಲೆಗಳಿಗೆ ಇ-ಮೇಲ್ ಮೂಲಕ ಕಳುಹಿಸಲಾಗುವುದು.
2. ತಮ್ಮ ಕಚೇರಿಗೆ ಪ್ರವೇಶ ಪತ್ರದೊಂದಿಗೆ ಹಾಜರಾಗುವ ಅಭ್ಯರ್ಥಿಗಳ ಮೂಲ ದಾಖಲೆಗಳನ್ನು ಕಡ್ಡಾಯವಾಗಿ ಪರಿಶೀಲಿಸಬೇಕು.
3. ಪ್ರವೇಶಕ್ಕೆ ನಿಗಧಿಪಡಿಸಿರುವ ಅಂತಿಮ ದಿನಾಂಕದ ವರೆಗೂ ದಾಖಲೆಗಳನ್ನು ಪರಿಶೀಲಿಸಿ ಪ್ರತಿ ಅಭ್ಯರ್ಥಿಯ ದಾಖಲೆಗಳ ನಕಲು ಪ್ರತಿಗಳನ್ನು ಕ್ರೂಢೀಕರಿಸಿ, ಪರೀಕ್ಷಾ ಪೂರ್ವ ತರಬೇತಿ ಕೇಂದ್ರಕ್ಕೆ ಸಲ್ಲಿಸುವುದು.
4. ಅಭ್ಯರ್ಥಿಗಳು ಬೇರೆ ಜಿಲ್ಲೆಯವರಾಗಿದ್ದರೂ ಸಹ ಮೂಲ ದಾಖಲೆಗಳನ್ನು ಸಲ್ಲಿಸಿದಲ್ಲಿ ಅಂತಹ ಅಭ್ಯರ್ಥಿಗಳ ದಾಖಲೆಗಳನ್ನು ಕಡ್ಡಾಯವಾಗಿ ಪರಿಶೀಲಿಸುವುದು.
5. ಅಭ್ಯರ್ಥಿಗಳ ಪಟ್ಟಿಯನ್ನು ಪ್ರವೇಶಕ್ಕೆ ನಿಗಧಿಪಡಿಸಿರುವ ಅಂತಿಮ ದಿನಾಂಕದ ನಂತರ ಎರಡು ದಿನಗಳೊಳಗೆ ಪರೀಕ್ಷಾ ಪೂರ್ವ ತರಬೇತಿ ಕೇಂದ್ರಕ್ಕೆ ಕಡ್ಡಾಯವಾಗಿ ಸಲ್ಲಿಸುವುದು ಮತ್ತು ಪರೀಕ್ಷಾ ಪೂರ್ವ ತರಬೇತಿ ಕೇಂದ್ರದಿಂದ ಕಳುಹಿಸಲಾಗುವ Google Sheet ನಲ್ಲಿ Upload ಮಾಡುವುದು.
~~~

6. ಪರಿಶೀಲಿಸಬೇಕಾದ ಮೂಲ ದಾಖಲಾತಿಗಳ ವಿವರ ಈ ಕೆಳಕಂಡಂತಿದೆ.

| | | |
|---|---|---|
| 1. | 10ನೇ ತರಗತಿ ಅಂಕಪಟ್ಟಿ | ಪರೀಕ್ಷಾ ಪೂರ್ವ ತರಬೇತಿಗಾಗಿ 40 ವರ್ಷ ವಯೋಮಿತಿ ನಿಗಧಿಪಡಿಸಲಾಗಿದ್ದು, 10 ನೇ ತರಗತಿ ಅಂಕಪಟ್ಟಿ ಮೂಲಕ ವಯೋಮಿತಿ ಖಚಿತ ಪಡಿಸಿಕೊಳ್ಳುವುದು. |
| 2. | ಪದವಿ ಅಂಕಪಟ್ಟಿ | ಅಂಕ ಪಟ್ಟಿ ಅಥವಾ Convocation ಮೂಲಕ ಪದವಿ ಪೂರ್ಣಗೊಳಿಸಿರುವ ಬಗ್ಗೆ ಖಚಿತ ಪಡಿಸಿಕೊಳ್ಳುವುದು.<br>ಕೆಲವು ಸಂದರ್ಭದಲ್ಲಿ ಅಂತಿಮ ಸೆಮಿಸ್ಟರ್ ನ ಫಲಿತಾಂಶ ಪ್ರಕಟಗೊಂಡು, ಮೂಲ ಅಂಕಪಟ್ಟಿ ವಿಶ್ವವಿದ್ಯಾಲಯದಿಂದ ಪಡೆಯದೇ ಇದ್ದಲ್ಲಿ ಪ್ರಾವಿಜನಲ್ ಮಾರ್ಕ್ಸ್ ಕಾರ್ಡ್ ನೀಡಿದ್ದರೆ, ಪ್ರಾವಿಜನಲ್ ಮಾರ್ಕ್ಸ್ ಕಾರ್ಡ್ ನೈಜತೆ ಪರಿಶೀಲಿಸಿ ಖಚಿತ ಪಡಿಸಿಕೊಂಡು, ಆಯ್ಕೆಗೆ ಪರಿಗಣಿಸುವುದು. |
| 3. | ಜಾತಿ ಪ್ರಮಾಣ ಪತ್ರ | ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಜಾತಿಗೆ ಸೇರಿದ ಬಗ್ಗೆ ತಹಶೀಲ್ದಾರರಿಂದ ನಮೂನೆ-ಡಿ ರಲ್ಲಿ ನೀಡಲಾದ ಜಾತಿ ಪ್ರಮಾಣ ಪತ್ರವನ್ನು (RD ಸಂಖ್ಯೆ) ಪರಿಶೀಲಿಸಿ ಖಚಿತ ಪಡಿಸಿಕೊಳ್ಳವುದು. |
| 4. | ಆದಾಯ ಪ್ರಮಾಣ ಪತ್ರ | ಅಭ್ಯರ್ಥಿಗಳ ಆಯ್ಕೆಗೆ ರೂ.5.00 ಲಕ್ಷ ವಾರ್ಷಿಕ ಆದಾಯ ಮಿತಿ ನೀಡಲಾಗಿದ್ದು, ಆದಾಯ ಪ್ರಮಾಣ ಪತ್ರದಲ್ಲಿ ಪರಿಶೀಲಿಸಿ ಖಚಿತ ಪಡಿಸಿಕೊಳ್ಳುವುದು. ರೂ. 5.00 ಲಕ್ಷಕಿಂತ ಹೆಚ್ಚಿನ ಕುಟುಂಬದ ಆದಾಯ ಹೊಂದಿರುವ ಅಭ್ಯರ್ಥಿಗಳ ಆಯ್ಕೆಯನ್ನು ರದ್ದುಪಡಿಸಲು ಹಿಂದಿರುಗಿಸುವುದು ಮತ್ತು ಷರಾ ಕಾಲಂನಲ್ಲಿ ಕಾರಣವನ್ನು ನಮೂದಿಸುವುದು. |
| 5. | ಹಾಸ್ಟೆಲ್ ವಿದ್ಯಾರ್ಥಿಗಳು | ಸರ್ಕಾರಿ ಹಾಸ್ಟೆಲ್ ನಲ್ಲಿ ಕನಿಷ್ಠ 3 ವರ್ಷ ಅಧ್ಯಯನ ಮಾಡಿರುವ ಬಗ್ಗೆ ಇಲಾಖೆಯಿಂದ ಹೊರಡಿಸಲಾದ ನಮೂನೆ-ಎ ರಲ್ಲಿ ನಿಲಯ ಮೇಲ್ವಿಚಾರಕರ ಸಹಿ ಹಾಗೂ ಮೊಹರನ್ನು ಪಡೆದು ಸಲ್ಲಿಸುತ್ತಿರುವ ಬಗ್ಗೆ ಪರಿಶೀಲಿಸುವುದು. ಒಂದೊಮ್ಮೆ ಅಭ್ಯರ್ಥಿಗಳು ದೃಢೀಕೃತ ದಾಖಲೆ ಸಲ್ಲಿಸಲು ವಿಫಲವಾದರೆ ಆಯ್ಕೆ ರದ್ದುಪಡಿಸಿ ಷರಾದಲ್ಲಿ ನಮೂದಿಸಿ ಸಲ್ಲಿಸುವುದು. |

| | | |
|---|---|---|
| 6. | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆ ಸಂಘದ ಪ್ರಮಾಣ ಪತ್ರ (KRIES) | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆ ಸಂಘದ ವಸತಿ ಶಾಲೆಯಲ್ಲಿ ಕನಿಷ್ಠ 5 ವರ್ಷ ಅದ್ಯಯನ ಮಾಡಿರುವ ಬಗ್ಗೆ ವಸತಿ ಶಾಲೆಯ ನಿಲಯ ಮೇಲ್ವಿಚಾರಕರ ಸಹಿ ಹಾಗೂ ಮೊಹರನ್ನು ಪಡೆದು ಸಲ್ಲಿಸುತ್ತಿರುವ ಬಗ್ಗೆ ಪರಿಶೀಲಿಸುವುದು. ಒಂದೊಮ್ಮೆ ಅಭ್ಯರ್ಥಿಗಳು ದೃಢೀಕೃತ ದಾಖಲೆ ಸಲ್ಲಿಸಲು ವಿಫಲವಾದರೆ ಆಯ್ಕೆ ರದ್ದುಪಡಿಸಿ ಷರಾದಲ್ಲಿ ನಮೂದಿಸಿ ಸಲ್ಲಿಸುವುದು. |
| 7. | ಅಲೆಮಾರಿ / ಅರೆಅಲೆಮಾರಿ ಕೋಟಾದಡಿ ಆಯ್ಕೆಯಾದ ಅಭ್ಯರ್ಥಿಗಳು | ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಜಾತಿ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಉಪ ಜಾತಿಗಳನ್ನು ಕಡ್ಡಾಯವಾಗಿ ಪರಿಶೀಲಿಸಿ ಅಭ್ಯರ್ಥಿಯು ಅಲೆಮಾರಿ / ಅರೆ ಅಲೆಮಾರಿ ಜಾತಿಯ ಬಗ್ಗೆ ಖಾತರಿಪಡಿಸಿಕೊಳ್ಳುವುದು. |
| 8. | ಸಫಾಯಿ ಕರ್ಮಚಾರಿಗಳು | ಸಂಬಂಧಪಟ್ಟ ಪ್ರಾಧಿಕಾರದಿಂದ ಸಫಾಯಿ ಕರ್ಮಚಾರಿ ಪ್ರಮಾಣ ಪತ್ರ ಪಡೆದಿರುವ ಬಗ್ಗೆ ಪರಿಶೀಲಿಸುವುದು. |
| 9. | ಅಂಗವಿಕಲ ಪ್ರಮಾಣ ಪತ್ರ | ಅಂಗವಿಕಲ ವರ್ಗಕ್ಕೆ ಸೇರಿದ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದಿರುವ ಬಗ್ಗೆ ಪರಿಶೀಲಿಸುವುದು. |

- ಮೂಲ ದಾಖಲೆ ಪರಿಶೀಲಿಸಿದ ತರುವಾಯ **"ಆಯ್ಕೆ ಪ್ರಮಾಣ ಪತ್ರ"**ಕ್ಕೆ ಮೊಹರಿನೊಂದಿಗೆ ಸಹಿ ಹಾಕಿ ಅಭ್ಯರ್ಥಿಯನ್ನು ತರಬೇತಿ ಸಂಸ್ಥೆಗೆ ತೆರಳಲು ತಿಳಿಸುವುದು.

ಈ ಮೇಲ್ಕಂಡ ಮಾರ್ಗಸೂಚಿಗಳನ್ವಯ ಪ್ರವೇಶಕ್ಕೆ ನಿಗಧಿಪಡಿಸಿದ ಅಂತಿಮ ದಿನಾಂಕದೊಳಗೆ ಮೂಲ ದಾಖಲಾತಿಗಳನ್ನು ಪರಿಶೀಲಿಸುವುದು.

ಹೆಚ್ಚಿನ ವಿವರಗಳಿಗೆ ಪರೀಕ್ಷಾ ಪೂರ್ವ ತರಬೇತಿ ಕೇಂದ್ರದ ವೆಬ್ ಸೈಟ್ **petc.kar.nic.in** ನ್ನು ಸಂಪರ್ಕಿಸುವುದು.

ತಮ್ಮ ವಿಶ್ವಾಸಿ,

ನಿರ್ದೇಶಕರು,
ಪರೀಕ್ಷಾ ಪೂರ್ವ ತರಬೇತಿ ಕೇಂದ್ರ,
ಬೆಂಗಳೂರು.